# ವಿವಿಧ ವಿನ್ಯಾಸಗಳ ಶ್ರಗ್ ತಯಾರಿಸಿ



ಈ ವಿಡಿಯೋದಲ್ಲಿ ಸುಂದರವಾದ ಡಿಸೈನರ್ ಶ್ರಗ್ ಮಾಡುವುದನ್ನು ಕಲಿಯೋಣ.











ಶ್ರಗ್ ಮಾಡಲು ನಿಮಗೆ ಬೇಕಾದ ವಸ್ತುಗಳೆಂದರೆ - 87 ಸೆಂಟಿಮೀಟರ್ ಉದ್ದ ಮತ್ತು 67 ಸೆಂಟಿಮೀಟರ್ ಅಗಲದ ಬಟ್ಟೆ., ನೀವು ಇಷ್ಟಪಡುವ ಬಟ್ಟೆ ಆಗಬಹುದು - ಅಂದರೆ ಕಸೂತಿ ಬಟ್ಟೆ ಅಥವಾ ರೋಮಗಳಿಂದ ಕೂಡಿದ ಬಟ್ಟೆ ಅಥವಾ ಹೊಳೆಯುವ ಮಿನುಗು ಬಟ್ಟೆ ಆಗಬಹುದು. ಮತ್ತೆ ಬೀಡೆಡ್ ಪಿನ್ನುಗಳು ಬೇಕು, ಅಲಂಕರಣಕ್ಕಾಗಿ ಫ್ಯಾಬ್ರಿಕ್ ಹೂವುಗಳು.

ಈ ಬಟ್ಟೆಯ ಒಳಬದಿ ಮೇಲ್ಮುಖವಾಗುವಂತೆ ಬಟ್ಟೆಯನ್ನು ತಿರುವಿಹಾಕಿ. ಕಡಿಮೆ ಉದ್ದದ ಬದಿಯಿಂದ ಪ್ರಾರಂಭಿಸಿ ಕಾಲು ಇಂಚಿನಷ್ಟು ಬಿಟ್ಟು, ಅಂಚಿನಲ್ಲಿ ಎರಡು ಎಳೆ ಮಾಡಿ ಮಡಚಿ. ಹೀಗೆ ಮಾಡುವಾಗ ಪಿನ್ನುಗಳಿಂದ ಭದ್ರಪಡಿಸಿಕೊಳ್ಳುತ್ತಿರಿ. ಬಟ್ಟೆಯ ಇನ್ನೊಂದು ತುದಿ ತಲುಪುವವರೆಗೂ ಹೀಗೆಯೇ ಮಾಡಿ.

ಬಟ್ಟೆಯ ಇನ್ನೊಂದು ಬದಿಯಲ್ಲಿಯೂ ಇದೇ ರೀತಿ ಪುನರಾವರ್ತಿಸಿ. ಮಡಿಚಿರುವುದನ್ನು ಪಿನ್ನುಗಳಿಂದ ಭದ್ರಪಡಿಸುತ್ತಿರಿ.

ಹೀಗೆ ಸಿದ್ಧಪಡಿಸಿದ ಬಟ್ಟೆಯನ್ನು ಹೊಲಿಗೆ ಯಂತ್ರದ ಬಳಿಗೆ ತೆಗೆದುಕೊಂಡು ಹೋಗಿ, ಮಡಚಿರುವ ಬಟ್ಟೆಯು ಒಳಗಿನ ಸೂಜಿಗೆ ಸರಿಯಾಗಿ ಕೂಡುವಂತೆ ಹೊಂದಿಸಿ. ಪ್ರೆಷರ್ ಫುಟ್‌ನ್ನು ಕೆಳಕ್ಕೆ ಮಾಡಿ. ನೀವು ಹೊಲಿಯುತ್ತಾ ಹೋದಂತೆ ಪಿನ್ನುಗಳನ್ನು ತೆಗೆಯುವುದನ್ನು ಮರೆಯಬೇಡಿ.

ಬಟ್ಟೆಯ ಮತ್ತೊಂದು ಬದಿಯಲ್ಲಿಯೂ ಇದೇ ರೀತಿಯ ಕ್ರಮ ಅನುಸರಿಸಿ. ಅಚ್ಚುಕಟ್ಟಾಗಿ ನೇರವಾದ ಸಾಲಿನಲ್ಲಿ ಹೊಲಿಯುವುದಕ್ಕೆ ಪ್ರಯತ್ನ ಮಾಡಿ.

ಈಗ ಬಟ್ಟೆಯನ್ನು ಒಳಭಾಗ ಮೇಲಕ್ಕೆ ಬರುವಂತೆ ಟೇಬಲ್ ಮೇಲೆ ಸಮತಟ್ಟಾಗಿ ಇಡಿ. ಹೊಲಿದ ಅಂಚುಗಳನ್ನು ಮೂಲೆಗಳ ಮಧ್ಯಕ್ಕೆ ಬರುವಂತೆ ಮಡಚಿ. ಇದು 90 ಡಿಗ್ರಿ ಕೋನದಲ್ಲಿದ್ದು, ಮೂಲೆಗಳು ನಿಖರವಾಗಿ ಹೊಂದಿಕೊಳ್ಳಬೇಕು.

ಬಟ್ಟೆಯ ಇನ್ನೊಂದು ಭಾಗದಲ್ಲಿಯೂ ಇದೇ ರೀತಿ ಅನುಸರಿಸಿ.



ಹೊರಮೂಲೆಯಿಂದ 17 ಸೆಂಟಿಮೀಟರ್ ಒಳಭಾಗದಲ್ಲಿ ಗುರುತು ಮಾಡಿ, ಬಟ್ಟೆಯ ಸರಿಯಾದ ಭಾಗಗಳನ್ನು ಒಟ್ಟಿಗೆ ಸೇರಿಸಿ ಮೇಲಕ್ಕೆ ಹಿಡಿಯಿರಿ ಮತ್ತು ಬಟ್ಟೆಯನ್ನು ಹಿಂಭಾಗಕ್ಕೆ ತಿರುಗಿಸಿ. ಒಟ್ಟಿಗೇ ಹಿಡಿದುಕೊಂಡು ಪಿನ್ನುಗಳನ್ನು ಚುಚ್ಚಿ.

ಬಟ್ಟೆಯ ಎದುರು ಬದಿಯಲ್ಲಿಯೂ ಇದೇ ರೀತಿ ಮಾಡಿ.

ನಂತರ ಬಟ್ಟೆಯನ್ನು ಹೊಲಿಗೆ ಯಂತ್ರದ ಬಳಿಗೆ ತೆಗೆದುಕೊಂಡು ಹೋಗಿ. 17 ಸೆಂಟಿಮೀಟರಿನಲ್ಲಿರುವ ಗುರುತಿನಿಂದ ಪ್ರಾರಂಭಿಸಿ ಸಮತಟ್ಟಾದ ಬದಿಯವರೆಗೂ ಹೊಲಿಯಿರಿ.
ಹೊಲಿಯುತ್ತಿರುವಂತೆ ಪಿನ್ನುಗಳನ್ನು ತೆಗೆಯುವುದನ್ನು ಮರೆಯಬೇಡಿ. ಹೊಲಿಗೆಯನ್ನು ಲಾಕ್ ಮಾಡಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಇದೇ ರೀತಿ ಇನ್ನೊಂದು ಬದಿಯಲ್ಲಿಯೂ ಪುನರಾವರ್ತಿಸಿ.
ಹೊಲಿದ ಬಟ್ಟೆಯನ್ನು ಈಗ ಟೇಬಲ್ ಮೇಲಿಡಿ. ತುದಿಗಳಿಂದ ಸುಮಾರು 10 ಸೆಂಟಿ ಮೀಟರ್ ನೀವು ಹೊಲಿಗೆ ಹಾಕಿರುವುದನ್ನು ನೋಡುತ್ತೀರಿ.



ಅಸ್ತವ್ಯಸ್ತವಾದ ಅಂಚುಗಳನ್ನು ಪೂರ್ಣಗೊಳಿಸಲು, ಸಮತಟ್ಟಾದ ರೇಖೆಗಳನ್ನು ತೆರೆಯುವುದರ ಮೂಲಕ ರೇಖೆಗಳು ಕೂಡುವ ಜಾಗದಿಂದ ಪ್ರಾರಂಭಿಸಿ. ನಂತರ ಬಟ್ಟೆಯನ್ನು ಕಾಲು ಇಂಚು ಬಿಟ್ಟು ಮಡಚಿ. ಮಡಿಚಿರುವುದನ್ನು ಭದ್ರಪಡಿಸಲು ಪಿನ್ನುಗಳನ್ನು ಉಪಯೋಗಿಸಿ.

ಇದನ್ನು ಬಟ್ಟೆಯ ಸುತ್ತಲೂ ಮಡಿಚಿರುವ ಆರಂಭದ ಭಾಗವನ್ನು ತಲುಪುವವರೆಗೂ ಮಾಡಿ.

ಬಟ್ಟೆಯನ್ನು ಹೊಲಿಗೆ ಯಂತ್ರದಲ್ಲಿಟ್ಟು ಪ್ರೆಷರ್ ಫುಟ್ ಎಡ್ಜ್‌ನೊಂದಿಗೆ ಸರಿಹೊಂದಿಸಿ. ಫುಟ್ ಕೆಳಕ್ಕಿಳಿಸಿ ಹೊಲಿಗೆ ಪ್ರಾರಂಭಿಸಿ.



ನೀವು ಹೊಲಿಯುವ ಕೊನೆಯ ಹಂತಕ್ಕೆ ಬಂದಾಗ ಸ್ಟಿಚ್ ಲಾಕ್ ಮಾಡಿ. ಬಟ್ಟೆಯನ್ನು ಯಂತ್ರದಿಂದ ಹೊರತೆಗೆದು ಅದರ ಒಳಭಾಗ ಹೊರಕ್ಕೆ ಬರುವಂತೆ ತಿರುವಿ ಹಾಕಿ. ಈಗ ನಿಮ್ಮ ಶ್ರಗ್ ಸಿದ್ಧವಾಗಿದೆ.

ಈ ಶ್ರಗ್‌ಗೆ ಒಂದಿಷ್ಟು ಮೆರಗು ನೀಡಬೇಕೆಂದು ಅನಿಸಿದರೆ ಅದಕ್ಕೆ ಒಂದಿಷ್ಟು ಅಲಂಕೃತ ವಸ್ತುಗಳನ್ನು ಸೇರಿಸಬಹುದು.

ನಿಮ್ಮ ಸೃಜನಶೀಲತೆಯೊಂದಿಗೆ ಪ್ರಯೋಗಗಳನ್ನು ನಡೆಸಿ.
ನಿಮ್ಮ ಪ್ರೀತಿಪಾತ್ರರಿಗೆ ಅಮೂಲ್ಯ ಉಡುಗೊರೆ ಸಿದ್ಧವಾಗಿದೆ.